ಮುಚ್ಚಿಟ್ಟು ಆದಷ್ಟು ಜಾಣತನದಿಂದ, ತಾಳ್ಮೆಯಿಂದ ನೆಮ್ಮದಿಯ ಸುಭದ್ರ ಜೀವನ ನಡೆಸುವುದು. ಆಯ್ಕೆ ನಿನಗೇ ಬಿಟ್ಟದ್ದು. ಪೂರ್ವಾಪರ ವಿವೇಚನೆಯಿಂದ ಆಲೋಚಿಸಿ ನಿರ್ಧರಿಸು'. ರಾತ್ರಿ ತುಂಬಾ ಹೊತ್ತಿನ ತನಕ ಚರ್ಚಿಸಿದೆವು.

★★★

ಮುಂದಿನ ಕಥೆ ಸಂಕ್ಷಿಪ್ತವಾಗಿ ಹೇಳುತ್ತೇನೆ. ಮಾರನೆಯ ದಿನವೇ ಚಂದ್ರ ತನ್ನ ಪ್ರೇಯಸಿ ಜಾನಕಿಗೆ ತನ್ನ ಹುಟ್ಟಿನ ಗುಟ್ಟನ್ನು ತಿಳಿಸಿದ. ಅವಳು ಆಘಾತಗೊಂಡು ಕೊಂಚ ಕಾಲ ಕಂಗೆಟ್ಟಳು. ನಂತರ ಸಮಾಧಾನಗೊಂಡು, 'ಆಯ್ತು ಪರವಾಗಿಲ್ಲ. ಇದರಿಂದಾಗಿ ನಮ್ಮ ಪ್ರೇಮಕ್ಕಾಗಲೀ, ಮದುವೆಗಾಗಲೀ ಏನೂ ಬಾಧಕವಿಲ್ಲ' ಎಂದಳು. 'ನಾನು ಬ್ಯಾಂಕಿನ ಕೆಲಸಕ್ಕೆ ರಾಜೀನಾಮೆ ಕೊಟ್ಟು, ನನ್ನ ಹಳ್ಳಿಗೆ ಹಿಂತಿರುಗುವ ನಿರ್ಧಾರ ಮಾಡಿದ್ದೇನೆ. ಅಲ್ಲಿ ಈಗ ನನ್ನವರೇ ಆದ ದಲಿತರ ಸ್ಥಿತಿಗತಿಗಳನ್ನು ಉತ್ತಮಪಡಿಸಲು ನನ್ನ ಕೈಲಾದ ಪ್ರಯತ್ನ ಹೋರಾಟ ಮಾಡಬೇಕೆಂದಿದ್ದೇನೆ. ಆದರೆ ನಿನ್ನ ಪ್ರೀತಿ, ನಿನ್ನ ಒಡನಾಟ ಇಲ್ಲದೆ ನಾನು ಬದುಕಲಾರೆ. ದಯವಿಟ್ಟು ನೀನೂ ಕೆಲಸಕ್ಕೆ ರಾಜೀನಾಮೆ ಕೊಟ್ಟು ಬಂದು ಬಿಡು. ಇಬ್ಬರೂ ಒಟ್ಟಿಗೆ ಹಳ್ಳಿಗೆ ಹೋಗಿ ಅರ್ಥವತ್ತಾದ ಹೊಸ ಜೀವನ ಪ್ರಾರಂಭಿಸೋಣ' ಎಂದ. ಈಗ ಜಾನಕಿ ಹಿಮ್ಮೆಟ್ಟಿದಳು. 'ಕ್ರಾಂತಿಗೀತೆ, ಹೋರಾಟ, ಗೀರಾಟ ನನ್ನ ಕೈಲಿ ಸಾಧ್ಯವಿಲ್ಲ' ಎಂದಳು. ಪ್ರೇಮ ಮತ್ತು ಧ್ಯೇಯದ ನಡುವೆ ಈಗ ಆಯ್ಕೆ ಬಂತು. ಚಂದ್ರ ಧ್ಯೇಯವಾದಿಯಾಗಿ, ಭಗ್ನಪ್ರೇಮಿಯಾಗಿ, ನೌಕರಿಗೆ ರಾಜೀನಾಮೆ ಕೊಟ್ಟು, ತನ್ನ ಹಳ್ಳಿಗೆ ಹಿಂತಿರುಗಿದ. ಅಲ್ಲಿ ತನ್ನ ಆಸ್ತಿ, ಪಾಸ್ತಿ, ವ್ಯವಹಾರ ವಹಿವಾಟು ಸರಿಯಾಗಿ ಅರ್ಥಮಾಡಿಕೊಂಡು, ತನ್ನ ಅಂಕೆಗೆ ತೆಗೆದುಕೊಂಡ. ತನ್ನ ತಂದೆಗಿದ್ದ ಗತ್ತು ಜಬರ ದಸ್ತನ್ನು ಕ್ರಮೇಣ ರೂಢಿಸಿಕೊಂಡ. ನಿಯತ್ತಿನ ಅಂಗರಕ್ಷಕರನ್ನು ಸಾಕಿಕೊಂಡ. ನಂತರ ತನ್ನ ಧ್ಯೇಯದ ಕಡೆ ಮುನ್ನಡೆದ.

ಮೊದಲು ಹೊಲೆಯರಲ್ಲಿ ತನ್ನ ಬಗ್ಗೆ ವಿಶ್ವಾಸ ಮೂಡಿಸಿದ. ಅವರಲ್ಲಿ ತಿಳಿವಳಿಕೆ, ಆತ್ಮವಿಶ್ವಾಸ ತುಂಬಿದ, ಬದಲಾವಣೆಗೆ ಹುರಿದುಂಬಿಸಿದ. ಜಮೀನ್ದಾರ ರೆಡ್ಡಿಯೇ ತಮ್ಮ ಬೆಂಬಲಕ್ಕೆ ನಿಂತದ್ದರಿಂದ ಹೊಲೆಯರು ಹುಮ್ಮಸ್ಸಿನಿಂದ ಮೇಲೆದ್ದರು. ಹೊಲೆಯರಿಗೆ ಕುಡಿಯುವ ನೀರಿನ ಪ್ರತ್ಯೇಕ ವ್ಯವಸ್ಥೆ ಇರಲಿಲ್ಲ. ಊರಾಚೆಯ ಕೆರೆಯ ಒಂದು ಪ್ರತ್ಯೇಕ ಹೊಂಡದಿಂದ ಕೆಸರು ನೀರು ತಂದು ಕುಡಿಯುತ್ತಿದ್ದರು. ಆದ್ದರಿಂದ ಶುದ್ಧ ನೀರಿಗಾಗಿ ಹೊಲೆಗೇರಿಯ ಹತ್ತಿರ ಒಂದು ಬಾವಿ ತೋಡಿಸಿದ. ಊರು ಸುಮ್ಮನಿತ್ತು, ಹೊಲೆಯರಿಗೆ ಮೈತುಂಬ ತೊಡಲು ಬಟ್ಟೆ ಕೊಟ್ಟ, ವಾರಕ್ಕೊಮ್ಮೆಯಾದರೂ ಸ್ನಾನ ಮಾಡಲು ಕಲಿಸಿದ. ಊರು ಸುಮ್ಮನಿತ್ತು. ಗುಡಿಸಲುಗಳನ್ನು ಕಿತ್ತಿಸಿ ಜನತಾ ಮನೆಗಳನ್ನು ಕಟ್ಟಿಸಿಕೊಟ್ಟ, ಊರು ಸುಮ್ಮನಿತ್ತು. ತನ್ನ ಫಲವತ್ತಾದ ಹೊಲಗದ್ದೆಗಳ ಕೆಲವು ಭಾಗಗಳನ್ನು ಅವರಿಗೆ ಬರೆಸಿಕೊಟ್ಟ, ಇತರರ ಜಮೀನಿನಲ್ಲಿ ಗೇಯುವುದನ್ನು ತಪ್ಪಿಸಿ, ಹೊಲೆಯರನ್ನೂ ಭೂಸ್ವಾಮಿಗಳನ್ನಾಗಿ ಮಾಡಿದ. ಊರು ಕುದಿಯತೊಡಗಿತು. 'ಹೊಲೆಯರೂ ನಮ್ಮಂತೆ ಮನುಷ್ಯರಲ್ಲವೇ? ಅವರೇಕೆ ರಾತ್ರಿ ಹೊತ್ತು 'ಹೋ' ಎಂದು ಕೂಗಿಕೊಂಡು ಊರೊಳಕ್ಕೆ ಬರಬೇಕು? ಬೆಳಗಿನ ವೇಳೆಯೂ ಬಂದರೆ ತಪ್ಪೇನು? ಬರಲಿ' ಎಂದ. ಈಗ ಊರು ಸೆಟೆದೆದ್ದಿತು.

ಪಂಚಾಯಿತಿಯಾಯಿತು. ಊರ ಹಿರಿಯರು ಹೇಳಿದರು, 'ನೀನು ತಲೆತಲಾಂತರದಿಂದ ಅನೂಚಾನವಾಗಿ ನಡೆದು ಬರುತ್ತಿದ್ದ ಸತ್ಸಂಪ್ರದಾಯಗಳನ್ನು ಧಿಕ್ಕರಿಸಿ ನಡೆಯುತ್ತಿದ್ದೀಯ.